Akashvani : Bengaluru
National Bulletin In Kannada
04.11.2025 : 7.35am
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

*******

<><*<><>*><>

ಮುಖ್ಯಾಂಶಗಳು

೧. ಬಿಹಾರ ಮೊದಲ ಸುತ್ತಿನ ವಿಧಾನ ಸಭಾ ಚುನಾವಣೆ; ಬಹಿರಂಗ ಪ್ರಚಾರ ಇಂದು ಸಂಜೆ ಅಂತ್ಯ

೨. ಭವಿಷ್ಯದಲ್ಲಿ ಭಾರತ ಜಗತ್ತನ್ನು ಮುನ್ನಡೆಸಲಿದೆ - ಲೋಕಸಭಾ ಅಧ್ಯಕ್ಷ ಓಂ ಬಿರ್ಲಾ

೩. ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್ ಗೆದ್ದ ಭಾರತೀಯ ತಂಡಕ್ಕೆ ೫೧ ಕೋಟಿ ರೂಪಾಯಿ ಬಹುಮಾನ ಘೋಷಿಸಿದ ಬಿಸಿಸಿಐ

೪. ಫಿಡೆ ವಿಶ್ವಕಪ್ ಚೆಸ್ ಟೂರ್ನಿ-ಎರಡನೇ ಸುತ್ತಿಗೆ ಪ್ರವೇಶಿಸಿದ ಗ್ರ್ಯಾಂಡ್ ಮಾಸ್ಟರ್‌ಗಳಾದ ನಾರಾಯಣನ್, ದೀಪ್ತಾಯನ್ ಘೋಷ್

**************

ಬಿಹಾರದಲ್ಲಿ ಮೊದಲ ಹಂತದ ವಿಧಾನಸಭಾ ಚುನಾವಣೆಗೆ ಇಂದು ಸಂಜೆ ಪ್ರಚಾರ ಕೊನೆಗೊಳ್ಳಲಿದೆ. ಈ ಹಂತದ ಮತದಾನ ಇದೇ ೬ ರಂದು ೧೮ ಜಿಲ್ಲೆಗಳ ೧೨೧ ಕ್ಷೇತ್ರಗಳಲ್ಲಿ ನಡೆಯಲಿದೆ. ಎರಡೂ ಪ್ರಮುಖ ಮೈತ್ರಿಕೂಟಗಳಾದ ಎನ್‌ಡಿಎ ಮತ್ತು ಮಹಾಘಟಬಂಧನ್‌ನ ಪ್ರಮುಖ ನಾಯಕರು ಮತದಾರರನ್ನು ಸೆಳೆಯಲು ರಾಜ್ಯಾದ್ಯಂತ ಸತತ ರ್‍ಯಾಲಿಗಳನ್ನು ನಡೆಸುತ್ತಿದ್ದಾರೆ. ಹಿರಿಯ ಬಿಜೆಪಿ ನಾಯಕ ಮತ್ತು ಪ್ರಧಾನಿ ನರೇಂದ್ರ ಮೋದಿ ನಿನ್ನೆ ಸಹರ್ಸ ಮತ್ತು ಕತಿಹಾರ್‌ನಲ್ಲಿ ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡಿದರು. ೨೦೧೪ ರಲ್ಲಿ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದಾಗ, ನಳಂದದ ವೈಭವವನ್ನು ಪುನಃಸ್ಥಾಪಿಸಲು ಅಭಿಯಾನವನ್ನು ಪ್ರಾರಂಭಿಸಿತು ಎಂದ ಅವರು, ನಳಂದ ವಿಶ್ವವಿದ್ಯಾಲಯಕ್ಕೆ ಭವ್ಯವಾದ ಕ್ಯಾಂಪಸ್ ನಿರ್ಮಿಸಲು ಕಳೆದ ದಶಕದಲ್ಲಿ ಸರ್ಕಾರ ೨ ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆ ಎಂದು

ಹೇಳಿದರು. ಹಿರಿಯ ಬಿಜೆಪಿ ನಾಯಕ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಸೀತಾಮರ್‌ಹಿಯಲ್ಲಿ ಸಾರ್ವಜನಿಕ ರ‍್ಯಾಲಿ ನಡೆಸಿದರು. ದೇಶದಲ್ಲಿ ಭಯೋತ್ಪಾದನೆಯನ್ನು ಕೊನೆಗೊಳಿಸಲು ಕಳೆದ ದಶಕದಲ್ಲಿ ಎನ್‌ಡಿಎ ಸರ್ಕಾರ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ ಎಂದು ಅವರು ಹೇಳಿದರು. ಆರ್‌ಜೆಡಿ ನಾಯಕ ಮತ್ತು ಮಹಾಘಟಬಂಧನ್‌ನ ಮುಖ್ಯಮಂತ್ರಿ ಅಭ್ಯರ್ಥಿ ತೇಜಸ್ವಿ ಪ್ರಸಾದ್ ಯಾದವ್ ಭೋಜ್‌ಪುರದಲ್ಲಿ ಚುನಾವಣಾ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದರು. ಈ ಬಾರಿ ಬಿಹಾರದಲ್ಲಿ ರಾಜಕೀಯ ಬದಲಾವಣೆ ಖಚಿತ ಎಂದು ಅವರು ಹೇಳಿದ್ದಾರೆ. ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ರೋಸೆರಾದಲ್ಲಿ ರೋಡ್ ಶೋ ನಡೆಸಿದರು.

**************

ತಂತ್ರಜ್ಞಾನ ಮತ್ತು ಸಂಶೋಧನೆ ಹಾಗೂ ಅಭಿವೃದ್ಧಿ ಉಪಕ್ರಮಗಳಿಂದ ಭಾರತವು ಭವಿಷ್ಯದಲ್ಲಿ ಜಗತ್ತನ್ನು ಮುನ್ನಡೆಸಲಿದ್ದಾರೆ ಎಂದು ಲೋಕಸಭಾ ಅಧ್ಯಕ್ಷ ಓಂ ಬಿರ್ಲಾ ಹೇಳಿದ್ದಾರೆ. ಕೊಲ್ಕತ್ತಾದಲ್ಲಿ ನಿನ್ನೆ ಅವರು ಭಾರತ್ ಛೇಂಬರ್ ಆಫ್ ಕಾಮರ್ಸ್‌ನ ೧೨೫ನೇ ಸಂಸ್ಥಾಪನಾ ಸಮಾರಂಭದಲ್ಲಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತ ಶುದ್ಧ ತಂತ್ರಜ್ಞಾನದ ಕೇಂದ್ರವಾಗಿದೆ. ನೈಸರ್ಗಿಕ ಸಂಪನ್ಮೂಲಗಳು ಕೌಶಲ್ಯ ಪೂರ್ಣ ಮಾನವ ಸಂಪನ್ಮೂಲಗಳು ಮತ್ತು ಅಭಿವೃದ್ಧಿ ಹೊಂದಿದ ಮೂಲಸೌಕರ್ಯಗಳ ಸಂಯೋಜನೆಯಿಂದ ಭಾರತದ ಆರ್ಥಿಕತೆಯು ಬಲೊಂಡಿದೆ ಎಂದು ತಿಳಿಸಿದರು.

**************

ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದು ಬೆಳಿಗ್ಗೆ ನೈನಿತಾಲ್‌ನಲ್ಲಿರುವ ನೀಮ್ ಕರೋಲಿ ಬಾಬಾ ಅವರ ಆಶ್ರಮ, ಕೈಂಚಿ ಧಾಮಕ್ಕೆ ಭೇಟಿ ನೀಡಲಿದ್ದಾರೆ. ರಾಷ್ಟ್ರಪತಿಗಳ ಭೇಟಿಯಿಂದಾಗಿ ಭಕ್ತರು ಇಂದು ಮಧ್ಯಾಹ್ನ ೧೨ ಗಂಟೆಯ ನಂತರ ಮಾತ್ರ ದೇವಸ್ಥಾನಕ್ಕೆ ಬರುವಂತೆ ಕೈಂಚಿ ಧಾಮ ದೇವಾಲಯದ ಆಡಳಿತ ಮಂಡಳಿ ತಿಳಿಸಿದೆ. ರಾಷ್ಟ್ರಪತಿ ಮುರ್ಮು ಇಂದು ನೈನಿತಾಲ್‌ನ ಕುಮಾವೂನ್ ವಿಶ್ವವಿದ್ಯಾಲಯದ ೨೦ ನೇ ಘಟಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ಅವರು ಉತ್ತರಾಖಂಡಕ್ಕೆ ತಮ್ಮ ಮೂರು ದಿನಗಳ ಭೇಟಿಯ ಎರಡನೇ ದಿನವಾದ ನಿನ್ನೆ ನೈನಿತಾಲ್‌ಗೆ ಆಗಮಿಸಿದರು. ಭದ್ರತಾ ಕಾರಣಗಳಿಗಾಗಿ, ಜಿಲ್ಲೆಯನ್ನು 'ಡ್ರೋನ್ ಹಾರಾಟ ನಿಷೇಧ ವಲಯ' ಎಂದು ಘೋಷಿಸಲಾಗಿದೆ.

**************

ಇತಿಹಾಸದಲ್ಲಿ ಮೊದಲ ಬಾರಿಗೆ ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್ ಗೆದ್ದ ಭಾರತೀಯ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿಯರು, ಸಹಾಯಕ ಸಿಬ್ಬಂದಿ ಮತ್ತು ಆಯ್ಕೆ ಸಮಿತಿಯ ಆಟಗಾರ್ತಿಯರಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ೫೧ ಕೋಟಿ ರೂಪಾಯಿಗಳ ನಗದು ಬಹುಮಾನವನ್ನು ಘೋಷಿಸಿದೆ. ದೇಶಾದ್ಯಂತ ಲಕ್ಷಾಂತರ ಅಭಿಮಾನಿಗಳ ಆಕಾಂಕ್ಷೆಗಳನ್ನು ಈಡೇರಿಸುವ ಮೂಲಕ ಬೆಂಬಲ ಸಿಬ್ಬಂದಿ ಮತ್ತು ಪ್ರತಿಯೊಬ್ಬ ಪಾಲುದಾರರು ಅದ್ದೂರಿ ವೇದಿಕೆಯಲ್ಲಿ ಅಸಾಧಾರಣ ಪ್ರದರ್ಶನ ನೀಡಿದ್ದಾರೆ ಎಂದು ಬಿಸಿಸಿಐ ಹೇಳಿದೆ. ಕಳೆದ ಭಾನುವಾರ ನವಿ ಮುಂಬೈನಲ್ಲಿ ನಡೆದ ಐಸಿಸಿ ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್ ಫೈನಲ್‌ನಲ್ಲಿ ಹರ್ಮನ್‌ಪ್ರೀತ್ ಕೌರ್ ನೇತೃತ್ವದ ಭಾರತ ತಂಡ ದಕ್ಷಿಣ ಆಫ್ರಿಕಾವನ್ನು ೫೨ ರನ್‌ಗಳಿಂದ ಸೋಲಿಸಿತು.

**************

ಮೇರಾ ಬೂತ್ ಸಬ್ಸೆ ಮಜ್ಬೂತ್ ಉಪಕ್ರಮದಡಿಯಲ್ಲಿ, ಪ್ರಧಾನಿ ನರೇಂದ್ರ ಮೋದಿ ಇಂದು ಬಿಹಾರದ ಮಹಿಳೆಯರೊಂದಿಗೆ ಸಂವಾದ ನಡೆಸಲಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಮೋದಿ ಮುಂಬರುವ ಚರ್ಚೆಗಾಗಿ ತಮ್ಮ ಉತ್ಸಾಹವನ್ನು ವ್ಯಕ್ತಪಡಿಸಿದ್ದಾರೆ. ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ-ಎನ್‌ಡಿಎ ಮೈತ್ರಿಕೂಟದ ಗೆಲುವನ್ನು ಖಚಿತಪಡಿಸಿಕೊಳ್ಳಲು ಮಹಿಳೆಯರು ಹೆಚ್ಚಿನ ಸಮರ್ಪಣೆಯೊಂದಿಗೆ ಕೊಡುಗೆ ನೀಡುತ್ತಿದ್ದಾರೆ ಎಂದ ಅವರು, ಪ್ರಚಾರದಲ್ಲಿ ಅವರ ಸಕ್ರಿಯ ಭಾಗವಹಿಸುವಿಕೆಯು ಬಿಹಾರದಲ್ಲಿ ಪ್ರಜಾಪ್ರಭುತ್ವ ಪ್ರಕ್ರಿಯೆಯ ಪ್ರಯಾಣವನ್ನು ಬಲಪಡಿಸುತ್ತಿದೆ ಎಂದು ಅವರು ಒತ್ತಿ ಹೇಳಿದರು.

**************

ಪ್ರಸ್ತುತ ಭಾರತ ಭೇಟಿಯಲ್ಲಿರುವ ಇಸ್ರೇಲ್ ವಿದೇಶಾಂಗ ಸಚಿವ ಗಿಡಿಯಾನ್ ಸಾರ್ ಇಂದು ನವದೆಹಲಿಯಲ್ಲಿ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಅವರನ್ನು ಭೇಟಿ ಮಾಡಲಿದ್ದಾರೆ. ಭಾರತ ಮತ್ತು ಇಸ್ರೇಲ್ ಕಾರ್ಯತಂತ್ರದ ಪಾಲುದಾರಿಕೆಯನ್ನು ಹಂಚಿಕೊಂಡಿವೆ ಮತ್ತು ಎರಡೂ ದೇಶಗಳ ನಡುವಿನ ದ್ವಿಪಕ್ಷೀಯ ರಾಜಕೀಯ ಸಂಬಂಧಗಳು ಭವಿಷ್ಯದ ದೂರದೃಷ್ಟಿಯಿಂದ ಕೂಡಿವೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. ೨೦೨೨-೨೩ನೇ ವರ್ಷದಲ್ಲಿ, ಎರಡೂ ದೇಶಗಳು ಜಂಟಿಯಾಗಿ ದ್ವಿಪಕ್ಷೀಯ ಸಂಬಂಧಗಳನ್ನು ಪೂರ್ಣ ರಾಜತಾಂತ್ರಿಕ ಸಂಬಂಧಗಳಿಗೆ ಏರಿಸಿದ ೩೦ ವರ್ಷಗಳನ್ನು ಆಚರಿಸಿದವು. ದೇಶಗಳ ನಡುವಿನ ನಾಗರಿಕ ಸಂಬಂಧಗಳು ಎರಡು ಸಹಸ್ರಮಾನಗಳಿಗಿಂತಲೂ ಹಿಂದಿನವು ಎಂದು ಸಚಿವಾಲಯ ಹೇಳಿದೆ.

**************

ಅಖಿಲ ಭಾರತ ಫುಟ್ಬಾಲ್ ಫೆಡರೇಶನ್, ಭಾರತೀಯ ಮಹಿಳಾ ಲೀಗ್, ಅನ್ನು ಎರಡು ಹಂತಗಳಲ್ಲಿ ನಡೆಸಲಾಗುವುದು ಎಂದು ತಿಳಿಸಿದೆ. ಮೊದಲ ಹಂತವು ಡಿಸೆಂಬರ್ ೨೦ರಿಂದ ಜನವರಿ ೦೬ ರವರೆಗೆ ನಡೆಯಲಿದೆ, ಆದರೆ ಎರಡನೇ ಹಂತವು ಮುಂದಿನ ವರ್ಷದ ಏಪ್ರಿಲ್ ೨೦ ರಂದು ಪ್ರಾರಂಭವಾಗಿ ಮೇ ೧೦ ರೊಳಗೆ ಕೊನೆಗೊಳ್ಳುತ್ತದೆ.

**************

ಕೇಂದ್ರ ಕಲ್ಲಿದ್ದಲು ಗಣಿ ಸಚಿವ ಜಿ. ಕಿಶನ್ ರೆಡ್ಡಿ ಅವರು ಹೈದರಾಬಾದ್ ಮೆಟ್ರೋ ರೈಲಿನ ಪ್ರಸ್ತಾವಿತ ಎರಡನೇ ಹಂತದ ಪರಿಷ್ಕೃತ ವಿವರವಾದ ಯೋಜನಾ ವರದಿಯನ್ನು ತೆಲಂಗಾಣ ಸರ್ಕಾರ ಇನ್ನೂ ಸಲ್ಲಿಸಿಲ್ಲ ಎಂದು ಹೇಳಿದ್ದಾರೆ. ಅಧಿಕೃತ ಕಂಪನಿಯಾದ ಎಲ್ & ಟಿ ಮೆಟ್ರೋ ರೈಲು ಹೈದರಾಬಾದ್‌ನಿಂದ ಹಿಂತಿರುಗಿ ಪಡೆಯಲು ರಾಜ್ಯ ನಿರ್ಧರಿಸಿದ ನಂತರ ಅವರು ಈ ಹೇಳಿಕೆ ನೀಡಿದ್ದು, ಒಪ್ಪಂದದ ಬಗ್ಗೆ ಕೇಂದ್ರಕ್ಕೆ ಔಪಚಾರಿಕವಾಗಿ ತಿಳಿಸಲಾಗಿಲ್ಲ ಎಂದು ಹೇಳಿದರು.

**************

ಇಂದಿನಿಂದ ಈ ತಿಂಗಳ ೬ ರವರೆಗೆ ಕತಾರ್‌ನ ದೋಹಾದಲ್ಲಿ ನಡೆಯಲಿರುವ ಎರಡನೇ ವಿಶ್ವ ಸಾಮಾಜಿಕ ಅಭಿವೃದ್ಧಿ ಶೃಂಗಸಭೆಗೆ ಭಾರತೀಯ ನಿಯೋಗವನ್ನು ಕಾರ್ಮಿಕ ಮತ್ತು ಉದ್ಯೋಗ ಸಚಿವ ಮನ್ಸುಖ್ ಮಾಂಡವಿಯ ಮುನ್ನಡೆಸಲಿದ್ದಾರೆ.

ಶೃಂಗಸಭೆಯ ಸಂದರ್ಭದಲ್ಲಿ, ಡಾ. ಮಾಂಡವಿಯ ಅವರು ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ, ಸಾಮಾಜಿಕ ನ್ಯಾಯಕ್ಕಾಗಿ ಜಾಗತಿಕ ಒಕ್ಕೂಟದ ಸಚಿವರ ಸಂವಾದದಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ. ಅವರು ಸಾಮಾಜಿಕ ಅಭಿವೃದ್ಧಿಯ ಮೂರು ಸ್ತಂಭಗಳನ್ನು ಬಲಪಡಿಸುವ ಕುರಿತು ಉನ್ನತ ಮಟ್ಟದ ದುಂಡು ಮೇಜಿನ ಸಭೆಯಲ್ಲಿ ಮಾತನಾಡಲಿದ್ದಾರೆ, ಎಲ್ಲರನ್ನು ಒಳಗೊಳ್ಳುವ ಮತ್ತು ಡಿಜಿಟಲ್ ಮೂಲಕ ಸಕ್ರಿಯಗೊಳಿಸಿದ ಬೆಳವಣಿಗೆಯ ಕಡೆಗೆ ಭಾರತದ ಪರಿವರ್ತನಾ ಪ್ರಯಾಣವನ್ನು ಹಂಚಿಕೊಳ್ಳಲಿದ್ದಾರೆ. ಸಚಿವರು ಕತಾರ್, ರೊಮೇನಿಯಾ, ಮಾರಿಷಸ್ ಮತ್ತು ಯುರೋಪಿಯನ್ ಒಕ್ಕೂಟದ ಸಚಿವರೊಂದಿಗೆ ಹಾಗೂ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಮಹಾನಿರ್ದೇಶಕರು ಮತ್ತು ಹಿರಿಯ ವಿಶ್ವಸಂಸ್ಥೆಯ ಅಧಿಕಾರಿಗಳೊಂದಿಗೆ ದ್ವಿಪಕ್ಷೀಯ ಸರಣಿ ಸಭೆಗನ್ನು ನಡೆಸಲಿದ್ದಾರೆ. ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ, ಭಾರತೀಯ ವ್ಯವಹಾರ ಮತ್ತು ವೃತ್ತಿಪರರ ಮಂಡಳಿ ಜಂಟಿಯಾಗಿ ಆಯೋಜಿಸಿರುವ ರಾಷ್ಟ್ರೀಯ ವೃತ್ತಿ ಸೇವೆ ಪೋರ್ಟಲ್‌ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಚಿವರು ಭಾಗವಹಿಸಲಿದ್ದಾರೆ.

*************

ಗ್ರ್ಯಾಂಡ್‌ಮಾಸ್ಟರ್‌ಗಳಾದ ನಾರಾಯಣನ್ ಎಸ್‌ಎಲ್ ಮತ್ತು ದೀಪ್ತಾಯನ್ ಘೋಷ್ ತಮ್ಮ ಎರಡೂ ಕ್ಷಿಪ್ರ ಪಂದ್ಯಗಳನ್ನು ಗೆದ್ದು ೨೦೨೫ ರ ಫಿಡೆ ವಿಶ್ವಕಪ್‌ನ ಎರಡನೇ ಸುತ್ತಿನಲ್ಲಿ ಸ್ಥಾನ ಪಡೆದರು, ಆದರೆ ನಿನ್ನೆ ಪಣಜಿಯಲ್ಲಿ ನಡೆದ ೧ ನೇ ಸುತ್ತಿನ ಟೈಬ್ರೇಕ್‌ನ ಎರಡನೇ ಹಂತದಲ್ಲಿ ಅರೋಣ್ಯಕ್ ಘೋಷ್ ನಿರ್ಣಾಯಕ ಪ್ರದರ್ಶನ ನೀಡಿ ಅವರೊಂದಿಗೆ ಸೇರಿಕೊಂಡರು. ಫಿಡೆ ವಿಶ್ವಕಪ್ ೨೦೨೫ ಅನ್ನು ಸಿಂಗಲ್-ಎಲಿಮಿನೇಷನ್ ನಾಕ್-ಔಟ್ ಪಂದ್ಯಾವಳಿಯಾಗಿ ಆಡಲಾಗುತ್ತದೆ, ಇದರಲ್ಲಿ ೮೨ ದೇಶಗಳಿಂದ ೨೦೬ ಆಟಗಾರರು ಭಾರತೀಯ ದಂತಕಥೆಯ ವಿಶ್ವನಾಥನ್ ಆನಂದ್ ಕಪ್‌ಗಾಗಿ ಸ್ಪರ್ಧಿಸುತ್ತಿದ್ದಾರೆ. ಕಾರ್ತಿಕ್ ಇಂದು ಎರಡನೇ ಸುತ್ತಿನಲ್ಲಿ ಗ್ರ್ಯಾಂಡ್ ಮಾಸ್ಟರ್ ಅರವಿಂದ್ ಚಿದಂಬರಂ ಅವರನ್ನು ಎದುರಿಸಲಿರುವುದರಿಂದ ಭಾರತಕ್ಕೆ ಮೂರನೇ ಸುತ್ತಿನಲ್ಲಿ ಒಂದು ಸ್ಥಾನ ಖಚಿತವಾಗಿದೆ.

*************